**ಸಾಕ್ಷಿಯನ್ನು ದಿಃ 17.12.2024 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 1 ಪರ ಶ್ರೀ.ಕೆ.ಹೆಚ್ಆರ್.ವಕೀಲರಿಂದ.**

ಕರಾರು ಪತ್ರ ಆಗುವ ಮೊದಲು ದಾಖಲೆಗಳನ್ನು ನೋಡಿರುತ್ತೇನೆ. ಪಹಣಿ ಮತ್ತು ಎಂ.ಆರ್ ದಾಖಲೆಗಳನ್ನು ನೋಡಿರುತ್ತೇನೆ. ನಾನು ನೋಡಿದ ದಾಖಲೆಗಳಲ್ಲಿ ಮೊದಲು ಗಿರಿಯಮ್ಮಾ ಅವರ ಹೆಸರಿಗೆ ಇದ್ದು ಅವರ ಮರಣಾ ನಂತರ ಪ್ರತಿವಾದಿ 1 ಅವರ ಹೆಸರಿಗೆ ಬಂದಿರುತ್ತದೆ. ಗಿರಿಯಮ್ಮ ಅವರಿಗೆ ಲಕ್ಷಮ್ಮಾ ಒಬ್ಬರೇ ಮಗಳು ಇರುತ್ತಾರೆ. ಗಿರಿಯಮ್ಮ ಅವರಿಗೆ ಸದರಿ ಆಸ್ತಿ ಸರ್ಕಾರದಿಂದ ಮಂಜೂರು ಆಗಿರುತ್ತದೆ. ಪ್ರತಿವಾದಿ 1 ಅವರು ಅವರ ಮಕ್ಕಳಾದ ಪ್ರತಿವಾದಿ 2 ಮತ್ತು 3 ಅವರ ಮದುವೆಯನ್ನು ಮಾಡಿ ಕಳುಹಿಸಿರುತ್ತಾರೆ ಎಂದರೆ ಸರಿ. ಇವತ್ತಿಗೂ ಸಹ ಪ್ರತಿವಾದಿ 1 ಅವರು ಪ್ರತ್ಯಕವಾಗಿ ಜೀವನ ನಡೆಸುತ್ತಿದ್ದಾರೆ ಎಂದರೆ ಸರಿ.

ಪ್ರತಿವಾದಿ 1 ಅವರೆ ನನಗೆ ಆಸ್ತಿ ಮಾರಾಟ ಮಾಡುವ ವಿಚಾರ ತಿಳಿಸಿರುತ್ತಾರೆ. ಮಾತುಕತೆಯ ಸಮಯದಲ್ಲಿ ನಾನು ಮತ್ತು 1ನೇ ಪ್ರತಿವಾದಿ ಮಾತ್ರ ಸೇರಿದ್ದೇವು. ಕ್ರಯದ ಮೊಬಲಗನ್ನು ನಾನು ಮತ್ತು 1ನೇ ಪ್ರತಿವಾದಿ ನಿರ್ದಾರ ಮಾಡಿರುತ್ತೇವೆ. ಜಮೀನಿನ ಮಾತುಕತೆಯ ಸಮಯದಲ್ಲಿ ಪ್ರತಿವಾದಿ 2 ಮತು 3 ಸೇರಿರಲಿಲ್ಲ. ಕರಾರು ಪತ್ರದಲ್ಲಿ ಪ್ರತಿವಾದಿ 2 ಮತ್ತು 3 ಅವರನ್ನು ಸೇರಿಸಬೇಕೆಂದು ಯಾರು ಹೇಳಿರುತ್ತಾರೆ ಎಂದರೆ ಸಾಕ್ಷಿ ನೊಂದಣಿ ಕಚೇರಿಯಲ್ಲಿ ದಸ್ತು ಬರಹಗಾರರು ಹೇಳಿದ್ದು ನಾನೇ ಮಾಹಿತಿ ನೀಡಿರುತ್ತೇನೆಂದು ಹೇಳುತ್ತಾರೆ. ಕ್ರಯದ ಕರಾರು ಪತ್ರದಲ್ಲಿ ಪ್ರತಿವಾದಿ 2 ಮತ್ತು 3 ಅವರನ್ನು ಸೇರಿಸಿರುವ ವಿಚಾರ ಪ್ರತಿವಾದಿ 1 ಅವರಿಗೆ ಗೊತ್ತಿಲ್ಲವೆಂದರೆ ಸರಿ. ದಸ್ತು ಬರಹಗಾರರು ಸಹಿ ಪಡೆಯಲು ಹೇಳಿರುತ್ತಾರೆಂದು ನುಡಿಯುತ್ತಾರೆ.

ನಾನು ವಕೀಲರ ಮೂಲಕ ಕಳುಹಿಸಿದ ನೋಟಿಸ್ ಜಾರಿ ಆದ ಮೇಲೆ ಪ್ರತಿವಾದಿ 1 ನನ್ನ ಬಳಿ ಬಂದು ಕ್ರಯ ಪತ್ರವನ್ನು ಬರೆದುಕೊಡುತ್ತೇನೆ ಉಳಿದ ಹಣವನ್ನು ಕೊಡುವಂತೆ ಹೇಳಿರುತ್ತಾರೆ ಎಂದರೆ ಸರಿ.

ಪ್ರತಿವಾದಿ 2 ಮತ್ತು 3 ಕ್ರಯ ಪತ್ರ ನೊಂದಣಿ ಮಾಡಕೊಡಲು ಬರದೇ ಇರುವ ಕಾರಣ ಈ ದಾವೆಯನ್ನು ಸಲ್ಲಿಸಿದ್ದು ಪ್ರತಿವಾದಿ 1 ಇವತ್ತಿಗೂ ಸಹ ಕ್ರಯದ ಉಳಿದ ಮೊಬಲಗು ಪಡೆದು ಕ್ರಯ ಪತ್ರ ಮಾಡಲು ತಯಾರು ಇರುತ್ತಾರೆ ಎಂದರೆ ಸರಿ. ಪ್ರತಿವಾದಿ 1 ರಿಂದ 3 ಅವರ ನಡುವೆ ಪ್ರತಿವಾದಿ 1 ಅವರ ಗಂಡನ ಮನೆಯ ಆಸ್ತಿಗೆ ಸಂಬಂಧಿಸಿದಂತೆ ಕೆಳ ನ್ಯಾಯಾಲಯದಲ್ಲಿ ಸಿವಿಲ್ ವ್ಯಾಜ್ಯ ಇರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಪ್ರತಿವಾದಿ 1 ಅವರು ಬೆಳೆ ಬೆಳೆದುಕೊಂಡು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಪ್ರತಿವಾದಿ 1 ಅವರು ಉಳಿದ ಹಣವನ್ನು ಪಡೆದು ಕ್ರಯ ಪತ್ರವನ್ನು ಮಾಡಿಕೊಡಲು ತಯಾರು ಇದ್ದು ನಾನು ಪ್ರತಿವಾದಿ 2 ಮತ್ತು 3 ಅವರೊಂದಿಗೆ ಸೇರಿ ಪ್ರತಿವಾದಿ 1 ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ/-

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ

ಕುಣಿಗಲ್.